ದಿನಾಂಕಃ **29.11.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ **MN** ವಕೀಲರಿಂದಃ

ಪ್ರತಿವಾದಿಯ ಮನೆ ಸುಮಾರು **20-21** ವರ್ಷಗಳಿಂದ ಇರುತ್ತದೆ. ಅದು ಗ್ರಾಮ ಠಾಣಾದಲ್ಲಿ ಇರುತ್ತದೆ. ವಾದಿಯು ಉತ್ತರಕ್ಕೆ ಬೇಲಿ ಹಾಕಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಜಮೀನಿನ ಉತ್ತರಕ್ಕೆ ದಾರಿ ಇರುತ್ತದೆ ನಡುವೆ ಯಾವುದೇ ಜಾಗ ಇರುವುದಿಲ್ಲ. ನಾನು ಈ ಬಗ್ಗೆ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಜಮೀನು ಮತ್ತು ರಸ್ತೆಯ ನಡುವೆ ಪ್ರತಿವಾದಿಯ ಮನೆ ಇರುತ್ತದೆ ಎಂದರೆ ಸರಿಯಲ್ಲ. ದಾರಿಯ ಪಕ್ಕ **5** ಅಡಿ ಬಿಟ್ಟು ಪ್ರತಿವಾದಿಯ ಮನೆ ಇರುತ್ತದೆ ಎಂದರೆ ಸರಿ. ವಾದಿಯ ಜಮೀನಿಗೂ ಪ್ರತಿವಾದಿಯ ನಿವೇಶನಕ್ಕೂ ಅಂತರ ಇಲ್ಲ ಪಕ್ಕದಲ್ಲಿ ಇರುತ್ತದೆ. ವಾದಿ ಮತ್ತು ಪ್ರತಿವಾದಿಯ ಜಾಗದ ನಡುವೆ **20** ಗಜ ಜಾಗ ಇರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿಯ ಮನೆಯ ಪಶ್ಚಿಮಕ್ಕೆ ಬೇರೆ ಮನೆಗಳು ಬರುತ್ತದೆ ಎಂದರೆ ಸರಿ. ಪ್ರತಿವಾದಿಯ ಮನೆಯ ಪಶ್ಚಿಮ ಮತ್ತು ಉತ್ತರಕ್ಕೆ ಅವರದ್ದೆ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸದರಿ ಜಾಗವನ್ನು ನನ್ನ ಅಣ್ಣ ತಮ್ಮಂದಿರು ಮಾರಾಟ ಮಾಡಿರುತ್ತಾರೆ. ನನ್ನ ಅಣ್ಣ ತಮ್ಮಂದಿರ ಬಳಿ ಅದನ್ನು ಪ್ರತಿವಾದಿ ಸ್ವಂತವಾಗಿ ಖರೀದಿ ಮಾಡಿರುತ್ತಾರೆ. ಮೊದಲಿಂದಲೂ ಸದರಿ ಜಾಗ ನನ್ನ ಅಣ್ಣ ತಮ್ಮಂದಿರಿಗೆ ಸೇರಿದ್ದು, ಪಂಚಾಯ್ತಿಯಿಂದ ಆಗಿರುತ್ತದೆ. ಪ್ರತಿವಾದಿಯೂ ರಾಧಕೃಷ್ಣ ರೆಡ್ಡಿ ರವರಿಂದ ಖರೀದಿ ಮಾಡಿರುತ್ತಾರೆ.

ನಾನು ಬೂದಿಬೆಟ್ಟ ಪಂಚಾಯ್ತಿಯ ಸದಸ್ಯನಾಗಿರಲಿಲ್ಲ, ನನ್ನ ತಾಯಿ ಅಧ್ಯಕ್ಷರಾಗಿದ್ದರು. ಪ್ರತಿವಾದಿ ಮನೆ ಸುತ್ತಲೂ ಕಲ್ಲಿನ ಕಾಂಪೌಂಡ್ ಹಾಕಿರುತ್ತಾರೆ ಎಂದರೆ

ಸರಿಯಲ್ಲ. ಈಗ ನೋಡುತ್ತಿರುವ ಪೋಟೋನಲ್ಲಿ ಕಾಣುತ್ತಿರುವುದು ಕಲ್ಲಿನ ಕಾಂಪೌಂಡ್ ಎಂದರೆ ಸರಿ, ಅದನ್ನು ಕೇವಲ ಮನೆಯ ಮುಂದೆ ಪ್ರತಿವಾದಿ ಹಾಕಿಸಿರುತ್ತಾರೆ. ಸದರಿ ಪೋಟೋವನ್ನು ಸಾಕ್ಷಿ ಗುರುತಿಸಿದ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಹೊಸದಾಗಿ ಕಟ್ಟುತ್ತಿರುವ ಮನೆಗೂ ಮತ್ತು ಬಿಳಿ ಬಣ್ಣದ ಮನೆಗೂ ಅಂತರ 10-12 ಅಡಿ ಇರುತ್ತದೆ. ಹೊಸದಾಗಿ ಕಟ್ಟುತ್ತಿರುವ ಮನೆಯ ಪೂರ್ವಕ್ಕೆ ಯಾವುದೇ ಜಾಗ ಇರುವುದಿಲ್ಲ. ಪೂರ್ವಕ್ಕೆ ಜಾಗ ಇದ್ದರೂ ಪ್ರತಿವಾದಿ ಕಾಂಪೌಂಡ್ ಕಟ್ಟುವಾಗ ನಾವು ಗಲಾಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ, ಅಲ್ಲಿ ಜಾಗ ಇರುವುದಿಲ್ಲ. ಹೊಸದಾಗಿ ಕಟ್ಟುತ್ತಿರುವ ಮನೆಯ ಪೂರ್ವದಲ್ಲಿ ಹುಲ್ಲಿನ ಬಣವೆ ಇರುತ್ತದೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ಪೋಟೋದಲ್ಲಿ ಹುಲ್ಲಿನ ಬಣವೆ ಇರುತ್ತದೆ ಎಂದರೆ ಸರಿ. ಸದರಿ ವಿಚಾರಕ್ಕೆ ಪೋಲಿಸರ ಬಳಿ ದೂರು ದಾಖಲಾಗಿರುತ್ತದೆ, ಅದು ನಿವೇಶನ ಆಗಿರುತ್ತದೆ. ಸದರಿ ಪೋಟೋವನ್ನು ಈಗ ನಿಡಿ-2 ಎಂದು ಗುರುತಿಸಲಾಯಿತು.

ಪಾವಗಡ ಎತ್ತಿನಹಳ್ಳಿ ರಸ್ತೆಯ ಉತ್ತರಕ್ಕೆ ಪ್ರತಿವಾದಿಯ ಮನೆ ಇರುತ್ತದೆ ಎಂದರೆ ಸರಿ. ಪ್ರತಿವಾದಿಯ ಮನೆಯಿಂದ 10-12 ಗಜ ನಂತರ ವಾದಿಯ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ವಾದಿಯ ಜಮೀನಿನ ಪಕ್ಕದಲ್ಲಿ ದಾರಿ ಇರುವುದಿಲ್ಲ, ಪ್ರತಿವಾದಿಯ ಮನೆಯ ನಂತರ ದಾರಿ ಬರುತ್ತದೆ ಎಂದರೆ ಸರಿ. ರತ್ನಮ್ಮ ರವರ ಜಮೀನಿನ ನಂತರ ಪ್ರತಿವಾದಿಯ ಮನೆ, ಪ್ರತಿವಾದಿಯ ಮನೆಯ ಮುಂದೆ ದಾರಿ ಬರುತ್ತದೆ. ವಾದಿ ಜಮೀನು ಹಾಗೂ ಪ್ರತಿವಾದಿ ಮನೆಯ ನಡುವೆ ಇರುವ ಜಾಗ ಪ್ರತಿವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ